YAGACHI RESERVOIR SCHEME

869. SRI K. H. HANUME GOWDA(Hassan):— Will the Minister of State for Major Irrigation be pleased to state.

(*a*) wehether the survey work for the porposed dam across Yagachi river in Belur taluk, Hassan Disstrict is completed;

(*b*) if so, the estimated cost of contruction of the same;

(*c*) when the work of this dam would be started ;

(*d*) the area and the extent of land in Hassan distrsct that would be irrigated from this dam ?

SRI H.N.NANJE GOWDA (Minister of State for Major Irrigation).-

(*a*) The survey work of Yagachi reservoir scheme is c mpleted.

(*b*) The estimated cost Rs. 712.50 lakhs.

(*c*) After receipt of clearnce from Central Government.

(*d*) Belur taluk 3,933 acres. Hassan taluk 28,067 acres.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ ಒಂದನೇದಾಗಿ ಈ ಪ್ರಾಜೆಕ್ಟ್‌ನಿಂದ ನೀರು ಒದಗಿಸ ತಕ್ಕಂಥಾ ಪ್ರದೇಶ ಕಳೆದ ೬-೭ ವರ್ಷಗಳಿಂದ ಪದೇ ಪದೇ ಕ್ಷಾಮಕ್ಕೆ ತುತ್ತಾಗುತಾ ಇದೆ.

ಎರಡನೇದಾಗಿ ಈ ಯುಗಚಿ ರಿವರ್ ೧೯೨೪ರ ಅಗ್ರಿಮೆಂಟ್ ಪ್ರಕಾರ ನಾನ್ ಪೆರ್ರೂಲ್ ರಿವರ್.

ಮೂರನೇದಾಗಿ ಕೇಂದ್ರದಲ್ಲೂ ರಾಜ್ಯದಲ್ಲೂ ಒಂದೇ ಪಾರ್ಟಿ ಸರ್ಕಾರ ಇರುವಾಗ ಈ ಯೋಜನೆಯನ್ನು ಕಳೆದ ೪೧೫ ವರ್ಷಗಳಿಂದಲೂ ಕೂಡ ಮುಂದೂಡುತ್ತಾ ಬಂದಿರುವುದಕ್ಕೆ ಕಾರಣ ಏನು? ಈ ಒಂದು ಯೋಜನೆ ಆಗದೆ ಈ ಜಿಲ್ಲೆಯ ಅರ್ಧ ಭಾಗದ ರೈತರು ಕ್ಷಾಮದ ದವಡೆಗೆ ಈಡಾಗಿರುವುದರಿಂದ ಇದರ ಬಗ್ಗೆ ತೀವ್ರವಾಗಿ ಕಾರ್ಯಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಯೇ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಎಚ್.ಎನ್. ನಂಜೇಗೌಡ: ಟೆಕ್ನಿಕಲ್ ಕ್ಲಿಯರೆನ್ಸ್ ಬಗ್ಗೆ ಜುಲೈ ೧೯೬೭ರಲ್ಲಿ ಕಳುಹಿಸಲಾಯಿತು. ಆಮೇಲೆ ಪ್ರಿಲಿಮಿನರಿ ಕಾಮೆಂಟ್ಸ್ ೧೯೬೮ರಲ್ಲಿ ಬಂತು. ಅದಕ್ಕೆ ಉತ್ತರವನ್ನು ಆಗಸ್ಟ್ ೧೯೬೯ರಲ್ಲಿ ಕಳುಹಿಸಲಾಯಿತು. ಫರ್ದರ್ ಕಾಮೆಂಟ್ಸ್ ಮಾರ್ಚ್ ೧೯೭೦ರಲ್ಲಿ ಬಂತು; ಮತ್ತು ಮೇನ್ ಕಾಮೆಂಟ್ಸ್ ಡಿಸೆಂಬರ್ ೧೯೭೦ರಲ್ಲಿ ಬಂತು. ಸೆಪ್ಟೆಂಬರ್ ೧೯೭೧ರಲ್ಲಿ ಕರೆಂಟ್ ರೇಟುಗಳ ಪ್ರಕಾರ ಎಸ್ಟಿಮೇಟನ್ನು ರೀಕ್ಯಾಸ್ಟ್ ಮಾಡಲಾಯಿತು. ಜನವರಿ ೭೨ಕ್ಕೆ ಪುನಃ ಇನ್ನೂ ಕೆಲವು ಅಬ್ಸಾರ್ವೇಷನ್ಸ್ ಸಿ.ಡಬ್ಲ್ಯೂ.ಪಿ.ಸಿ. ಯಿಂದ ಬಂತು. ಅದಕ್ಕೆ ಉತ್ತರಗಳನ್ನು ಏಪ್ರಿಲ್ ೧೯೭೨ಕ್ಕೆ ಕಳುಹಿಸಿಕೊಟ್ಟಿದ್ದೇವೆ. ಪುನಃ ಏನೋ ಕಾಮೆಂಟ್ಸ್ ಕೇಳಿದ್ದಾರೆ. ಇದು ಟೆಕ್ನಿಕಲ್ ಕ್ಲಿಯರೆನ್ಸ್‌ಗೆ ಸಂಬಂಧಪಟ್ಟ ಹಾಗೆ ಆಯಿತು. ಕಟ್ಟೆ ತೆಗೆದುಕೊಳ್ಳತಕ್ಕ ವಿಷಯದಲ್ಲಿ, ಹಣಕಾಸಿನ ವಿಚಾರ ಯೋಚನೆ ಮಾಡಿ ಉತ್ತರ ಹೇಳಬೇಕಾಗುತ್ತದೆ. ೯-೩೦ ಎ ಎಂ.

ಶ್ರೀ ಕೆ.ಎಚ್. ಹನುಮೇಗೌಡ: ಕಳೆದ ಆರೇಳು ವರ್ಷದಿಂದ ಆ ಪ್ರದೇಶದ ಜನರಿಗೆ ಕೂಲಿ ಒದಗಿಸುವ ಸೃಷ್ಟಿಯಿಂದ ಕೋಟ್ಯಾಂತರ ರೂಪಾಯಿ ಸರ್ಕಾರ ಒದಗಿಸುತ್ತ ಬಂದಿದೆ. ಈ ಯೋಜನೆ ಆಗಿದ್ದರೆ ಬಹುಶಃ ಆ ದುಡ್ಡು ಉಳಿತಾಯವಾಗಿರುತ್ತಿತ್ತು ಮತ್ತು ಶಾಶ್ವತವಾಗಿ ಆ ಜನ ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಅನುಕೂಲವಾಗುತ್ತ ಇತ್ತು. ಇಂಥ ಕಷ್ಟ ಪರಿಸ್ಥಿತಿಯಲ್ಲಿರುವ ಜನಗಳ ಬಗ್ಗೆ ಸರ್ಕಾರ ಇಷ್ಟು ನಿರಾಶಕ್ತಿ ಹೊಂದಿದರೆ ಹೇಗೆ? ಸರ್ಕಾರ ಈಗಲಾದರೂ ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ಎಚ್.ಎನ್. ನಂಜೇಗೌಡ:—ಹಿಂದಿನ ಸರ್ಕಾರ ನಿರಾಶಕ್ತಿ ಹೊಂದಿತ್ತೋ ಏನೋ. ಗೊತ್ತಿಲ್ಲ ನಮಗೆ ಅದನ್ನು ತೆಗೆದುಕೊಳ್ಳಬೇಕೆಂಬ ಆಸಕ್ತಿ ತುಂಬ ಇದೆ.

ಶ್ರೀ ಎಚ್.ಡಿ. ದೇವೇಗೌಡ:—ಹಿಂದಿನ ಸರ್ಕಾರ ನಿರಾಶಕ್ತಿ ಹೊಂದಿತ್ತು ಎಂದು ಹೇಳಿದರೇ ಹೊರತು, ಅವರು ಈ ಕಡೆ ಇದ್ದಾಗ ಟೆಕ್ನಿಕಲ್ ಕ್ಲಿಯರೆನ್ಸ್ ಸಿಕ್ಕಲಿ ಅಥವಾ ಸಿಕ್ಕದೆ ಇರಲಿ ಎಲ್ಲ ಪ್ರಾಜೆಕ್ಟ್ ಗಳನ್ನೂ ತೆಗೆದುಕೊಳ್ಳಬೇಕು ಎಂದು ಏನು ಪ್ರತಿಪಾದನೆ ಮಾಡುತ್ತಿದ್ದರು ಅದರಂತೆ ಟೆಕ್ನಿಕಲ್ ಕ್ಲಿಯರೆನ್ಸ್ ಬರಲಿ, ಬಿಡಲಿ, ಅವರು ಹೇಳುತ್ತಿದ್ದ ರೀತಿಯಲ್ಲಿ ಕಾರ್ಯತಃ ಮಾಡುತ್ತಾರೆಂದು ಭಾವಿಸೋಣವೇ?

ಶ್ರೀ ಎಚ್.ಎನ್. ನಂಜೇಗೌಡ:—ಕ್ಲಿಯರೆನ್ಸ್ ಬಂದರೂ ಹಣವನ್ನು ಕೊಡುವುದಿಲ್ಲ ಎನ್ನುವುದನ್ನು ಪದೇ ಪದೇ ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಈ ಪ್ರಾಜೆಕ್ಟನ್ನು ತೆಗೆದುಕೊಳ್ಳುವುದಕ್ಕೆ ಕ್ಲಿಯರೆನ್ಸ್ ಸಿಕ್ಕಿದೆಯೇ ಇಲ್ಲವೇ ಎನ್ನುವುದು ಮುಖ್ಯವಲ್ಲ. ಹಣದ ಸೌಲಭ್ಯವನ್ನು ಅನುಸರಿಸಿ ಪ್ರಾರಂಭ ಮಾಡುವುದಕ್ಕೆ ಯೋಚನೆ ಮಾಡುತ್ತೇವೆ.

ಶ್ರೀ ಎಚ್.ಡಿ. ದೇವೇಗೌಡ:—ಟೆಕ್ನಿಕಲ್ ಕ್ಲಿಯರೆನ್ಸ್ ಬರುವುದರಿಂದ, ಪ್ಲಾನ್‌ನಲ್ಲಿ ಸೇರಿದ ಮೇಲೆ ಅದಕ್ಕೆ ಹಣ ಬಂದೇ ಬರುತ್ತದೆ, ಬರುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಸಿ.ಡಬ್ಲ್ಯೂ.ಪಿ.ಸಿ.ಯಿಂದ ಕ್ಲಿಯರೆನ್ಸ್ ಸಿಕ್ಕಿದ ಮೇಲೆ ಭಾರತ ಸರ್ಕಾರದಿಂದ ಹಣ ಕಾಸಿನ ಸಹಾಯ ಬಂದೇ ಬರುತ್ತದೆಯಲ್ಲವೇ?

ಶ್ರೀ ಎಚ್. ಎನ್. ನಂಜೇಗೌಡ —ಅವರು ಕೊಡತಕ್ಕ ಅಸಿಸ್ಟೆನ್ಸ್, ಕೆಲವಾರು ರೀತಿನೀತಿಗಳನ್ನು ಅನುಸರಿಸಿರುತ್ತದೆ. ಅವರು ಇಂತಿಷ್ಟು ಎಂದು ಕೊಡುತ್ತಾರೆ. ೧೦೦ ಯೋಜನೆಗಳನ್ನು ಕ್ಲಿಯರ್ ಮಾಡಿದ್ದರೂ ಅಷ್ಟೇ, ೧೦ ಕ್ಲಿಯರ್ ಮಾಡಿದ್ದರೂ ಅಷ್ಟೇ, ಅವರು ಕೊಡುವ ಸಹಾಯ ಅಷ್ಟೇ. ಅದನ್ನು ಪದೇ ಪದೇ ಹೇಳಿದ್ದೇವೆ.

ಶ್ರೀ ಎಚ್.ಎಸ್. ಸಿದ್ದಪ್ಪ:—(ಡಿ) ಗೆ ಉತ್ತರವಾಗಿ ಬೇಲೂರು ಮತ್ತು ಹಾಸನ ತಾಲ್ಲೂಕುಗಳಲ್ಲಿ ನೀರಾವರಿಯಾಗಬಹುದಾದ ವಿಸ್ತೀರ್ಣವನ್ನು ಕೊಟ್ಟಿದ್ದಾರೆ. ಯಗಚಿ ಯೋಜನೆಯಿಂದ ಅರಸೀಕೆರೆಗೆ ಅನುಕೂಲ ಮಾಡಿಕೊಡಬೇಕು ಎಂದು ಸುಮಾರು ವರ್ಷಗಳಿಂದ, ಸ್ವಾತಂತ್ರ್ಯ ಬರುವುದಕ್ಕೆ ಮುಂಚಿನಿಂದ ಹೋರಾಟ ಮಾಡಿದರು. ಬಹುತೇಕ ಅರಸೀಕೆರೆ ತಾಲ್ಲೂಕಿನಿಂದ ಯಾವ ಮಂತ್ರಿಗಳೂ ಇಲ್ಲವೆಂದು ಈ ದುರದೃಷ್ಟ, ಪಾಪಿ ಜನರ ಕೈ ಬಿಟ್ಟಿದ್ದಾರೆ. ಈಗಲಾದರೂ ತಾವು ಆಸಕ್ತಿ ವಹಿಸಿ ಅರಸೀಕೆರೆ ತಾಲ್ಲೂಕಿಗೆ ನೀರನ್ನು ಒದಗಿಸಿಕೊಡುತ್ತೀರಾ?

ಶ್ರೀ ಎಚ್.ಎನ್. ನಂಜೇಗೌಡ:—ನನಗೆ ನೆನಪಿರುವ ಹಾಗೆ ಬೇಲೂರು ಮತ್ತು ಹಾಸನ ತಾಲ್ಲೂಕುಗಳಿಂದಲೂ ಯಾವ ಮಂತ್ರಿಗಳೂ ಇರಲಿಲ್ಲ.

ಶ್ರೀ ಎಚ್.ಡಿ ದೇವೇಗೌಡ:—ನಮ್ಮ ಜಿಲ್ಲೆಯ ಪಾರ್ಲಿಮೆಂಟ್ ಸದಸ್ಯರು ಯಗಚಿ ಯೋಜನೆಗೆ ಕ್ಲಿಯರೆನ್ಸ್ ಕೊಡಿಸಿದ್ದೇನೆ, ೧೫-೨೦ ದಿವಸಗಳಲ್ಲಿ ಕೆಲಸ ಪ್ರಾರಂಭವಾಗುತ್ತದೆ ಎಂದು ಭಾಷಣ ಮಾಡಿರುವುದು. ಇದೆ. ಶ್ರೀ ನಂಜೇಗೌಡರು ವೇಜರ್ ಇರಿಗೇಷನ್ ಮಂತ್ರಿಗಳಾದ ಮೇಲೆ ನಮ್ಮ ಜಿಲ್ಲೆಯಲ್ಲಿ ಹೇಮಾವತಿ ಪ್ರಾಜೆಕ್ಟ್ ಕೆಲಸ ನಿಂತು ಹೋಯಿತು, ಯಗಚಿ ಯೋಜನೆ ಆಗುವುದಿಲ್ಲ ಎಂದು ಅವರ ಪಕ್ಕದವರೇ ಮಾತನಾಡುತ್ತಿದ್ದಾರೆ. ಅದು ಆಧಾರರಹಿತವಾಗಿರಬಹುದು. ಯಗಚಿ ಪ್ರಾಜೆಕ್ಟಿಗೆ ತ್ವರಿತವಾಗಿ ಕ್ಲಿಯರೆನ್ಸ್ ಬಾರದೆ ಇದ್ದರೆ, ರಾಜ್ಯದ ಸಂಪನ್ಮೂಲಗಳಿಂದ ಅದರ ಕೆಲಸವನ್ನು ತೆಗೆದುಕೊಳ್ಳುವುದಲ್ಲದೆ, ಹೇಮಾವತಿ ಕೆಲಸವನ್ನು ತ್ವರಿತಗೊಳಿಸುತ್ತಾರೆಯೇ?

ಶ್ರೀ ಎಚ್. ಎನ್. ನಂಜೇಗೌಡ:—ನಾನು ಮಂತ್ರಿಯಾದ ಮೇಲೆ ಹೇಮಾವತಿ ಕೆಲಸ ನಿಂತು ಹೋಯಿತು ಎಂದು ಹೇಳಿದರು. ಇದ್ದುದನ್ನು ಇದ್ದ ಹಾಗೆಯೇ ಮುಂದುವರೆಸಿಕೊಂಡು ಹೋಗಿದ್ದಾರೆ, ಇನ್ನು ಒಂದು ವರ್ಷವಾದ ಮೇಲೆ ನಂಜೇಗೌಡರು ಒಂದು ಅಧ್ಯಾನವಾಯಿತು ಎಂದು ಹೇಳುತ್ತಿದ್ದರು. ಕೆಲವು ಕಡೆ ಎಕ್ಸೆಸ್ ಪೇಮೆಂಟ್ ಆಗಿದೆ. ಏನು ಅಚಾತುರ್ಯವಾಗಿದೆ, ಅಧ್ಯಾನವಾಗಿದೆ, ಅದನ್ನು ಕರಾರುವಾಕ್ಕಾಗಿ ತಿಳಿದುಕೊಳ್ಳುವುದಕ್ಕೆ, ವಿಚಾರ ಮಾಡುವುದಕ್ಕೆ ಸ್ವಲ್ಪ ಸ್ಲೋ ಡೌನ್ ಆಗಿರಬಹುದು ಎಕ್ಸೆಸ್ ಪೇಮೆಂಟ್ ಆಗಿರುವುದನ್ನು ಮತ್ತು ಇತರ ಅಧ್ಯಾನಗಳನ್ನು ಸರಿಪಡಿಸಿ, ಲೆಕ್ಕಾಚಾರವಾಗಿ ವ್ಯವಹಾರವನ್ನು ಮುಂದುವರಿಸಬೇಕಾಗುತ್ತದೆ. ಎಕ್ಸೆಸ್ ಪೇಮೆಂಟ್ ಆಗಿದೆ ಎನ್ನುವ ಅನುಮಾನ ಬಂದು ವಿಜಲೆನ್ಸ್ ಕಮಿಷನ್‌ನವರು ಎನ್‌ಕ್ವೈರಿ ಮಾಡಿರುವುದು ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಗೊತ್ತಿದೆ.

ಶ್ರೀ ಎಚ್.ಡಿ. ದೇವೇಗೌಡ —ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೂ, ಕಾರ್ಯವನ್ನು ವೇಗವಾಗಿ ನಡೆಸುವುದಕ್ಕೂ ಸಂಬಂಧವಿಲ್ಲ. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದು ಬೇಡ ಎಂದು ದೇವೇಗೌಡ ಹೇಳಿದರು ಎನ್ನುವ ಭಾವನೆ ಬೇಡ. ಪ್ರಾಜೆಕ್ಟ್ ಕೆಲಸ ವೇಗವಾಗಿ, ತ್ವರಿತವಾಗಿ ಆಗುವ ರೀತಿಯಲ್ಲಿ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತಾರೆಯೇ?